732 (721) ಶ್ರೀ ನರೇಂದ್ರಬಾಬು ನ.ಲ. (ರಾಜಾಜಿನಗರ) ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :-

(ಅ) ರಾಜ್ಯದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್‌ನ್ನು ಯಾವ ವರ್ಷದಲ್ಲಿ ಅನುಷ್ಠಾನಗೊಳಿಸಲಾಯಿತು ;

(ಆ) ಇದುವರೆವಿಗೂ ಈ ಯೋಜನೆಯಡಿ ವಿನಿಯೋಗಿಸಿರುವ ಒಟ್ಟು ಅನುದಾನ ಎಷ್ಟು ;

(ಇ) ಈ ಯೋಜನೆಯು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಕೇಂದ್ರ ಸರ್ಕಾರದ ಆದೇಶದಂತೆ, ಈ ಯೋಜನೆಯ ಕಾರ್ಯಕ್ರಮಗಳನ್ನು ತ್ವರಿತವಾಗಿ ಜಾರಿಗೆ ತರುವ ನಿಟ್ಟಿನಲ್ಲಿ ರಾಜ್ಯದ ಬೇರೆ ಆಡಳಿತಾತ್ಮಕ ಕಛೇರಿ (separate cell) ಪ್ರಾರಂಭಿಸುವ ಆಲೋಚನೆ ಸರ್ಕಾರದ ಮುಂದಿದೆಯೇ ;

(ಉ) ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಇದುವರೆಗೆ ಬಿಡುಗಡೆಯಾಗಿರುವ ಹಣ ಎಷ್ಟು ? (ಜಿಲ್ಲಾವಾರು ಮಾಹಿತಿ ಒದಗಿಸುವುದು) ;

(ಊ) ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು ;

(ಋ) ಹಾಗಿದ್ದಲ್ಲಿ, ಈ ಆರ್ಥಿಕ ವರ್ಷದಲ್ಲಿಯೇ ಪ್ರಾರಂಭಿಸಲಾಗುವುದೇ ?

ಶ್ರೀ ಶಶಿಕಾಂತ ಅ. ನಾಯಕ (ತೋಟಗಾರಿಕೆ ಸಚಿವರು) :-

(ಅ) ರಾಜ್ಯದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯನ್ನು 2005-06ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ.

(ಆ) ಇದುವರೆವಿಗೂ ಈ ಯೋಜನೆಯಡಿಯಲ್ಲಿ ರೂ. 71.51 ಕೋಟಿ ರೂ.ಗಳು ವಿನಿಯೋಗವಾಗಿರುತ್ತದೆ.

(ಇ) ಅನುಷ್ಠಾನದಲ್ಲಿ ವಿಳಂಬವಾಗಿರುವುದಿಲ್ಲ.

(ಈ) ಹೌದು, ಕರ್ನಾಟಕ ರಾಜ್ಯ ತೋಟಗಾರಿಕೆ ಮಿಷನ್ ಏಜೆನ್ಸಿಯು ತೋಟಗಾರಿಕೆ ಸಚಿವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ.

(ಉ) ಈ ವರೆವಿಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಒಟ್ಟು 133.95 ಕೋಟಿ ರೂ.ಗಳ ಅನುದಾನ ಬಿಡುಗಡೆಯಾಗಿರುತ್ತದೆ. ಜಿಲ್ಲಾವಾರು ಬಿಡುಗಡೆಯಾಗಿರುವ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

(ಊ) ಈ ಯೋಜನೆಯ ಅನುಷ್ಠಾನವು 2005-06ನೇ ಸಾಲಿನಿಂದ ಪ್ರಾರಂಭವಾಗಿದ್ದು, ಅನುಷ್ಠಾನಗೊಳ್ಳುತ್ತಿದೆ.

(ಋ) ಉದ್ಭವಿಸುವುದಿಲ್ಲ.

ಅನುಬಂಧ

2005-06 ಮತ್ತು 2006-07ನೇ ಸಾಲಿನಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ವಿವಿಧ ಜಿಲ್ಲೆಗಳಿಗೆ ಬಿಡುಗಡೆ ಮಾಡಿದ ಅನುದಾನದ ವಿವರ

ಕ್ರ. ಸಂ.	ಜಿಲ್ಲೆಗಳು	2005-06 (ರೂ. ಲಕ್ಷಗಳಲ್ಲಿ)	2006-07 (ರೂ. ಲಕ್ಷಗಳಲ್ಲಿ)	ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ)
1	ಬೆಂಗಳೂರು ಗ್ರಾಮಾಂತರ	336.45	473.38	809.83
2	ತುಮಕೂರು	232.88	306.75	539.63
3	ಕೋಲಾರ	231.94	304.79	536.73
4	ಮೈಸೂರು	196.33	174.02	370.35
5	ಕೊಡಗು	148.62	554.73	703.35
6	ಹಾಸನ	197.20	546.34	743.54
7	ದಕ್ಷಿಣ ಕನ್ನಡ	362.33	222.16	584.49
8	ಉಡುಪಿ	123.71	112.98	236.69
9	ಉತ್ತರ ಕನ್ನಡ	214.73	246.97	461.70
10	ಚಿತ್ರದುರ್ಗ	157.02	553.60	710.62
11	ಕೊಪ್ಪಳ	184.63	185.50	370.13
12	ಬೆಳಗಾವಿ	327.01	533.62	860.63
13	ಬಾಗಲಕೋಟೆ	89.31	154.02	243.33
14	ಬಿಜಾಪುರ	204.27	340.40	544.67
15	ಗುಲ್ಬರ್ಗ	105.58	170.13	275.71
16	ಚಿಕ್ಕಮಗಳೂರು	40.43	600.10	640.53
17	ಶಿವಮೊಗ್ಗ	66.66	691.96	758.62
18	ಬೆಂಗಳೂರು ನಗರ	32.05	117.78	149.83
19	ಮಂಡ್ಯ	55.71	40.18	95.89
20	ಚಾಮರಾಜನಗರ	38.38	28.16	66.54
21	ದಾವಣಗೆರೆ	36.38	33.22	69.60
22	ಹಾವೇರಿ	35.00	18.38	53.38
23	ಬಳ್ಳಾರಿ	45.19	61.70	106.89
24	ಧಾರವಾಡ	58.13	99.90	158.03
25	ಗದಗ	34.00	25.94	59.94
26	ರಾಯಚೂರು	39.10	41.64	80.74
27	ಬೀದರ್	35.26	47.94	83.20
28	ತೋಉನಿ, ಹುಳಿಮಾವು	143.65	204.16	347.81
29	ನಿರ್ದೇಶನಾಲಯದಿಂದ ಉಳಿಸಿಕೊಂಡಿರುವುದು	683.17	2049.55	2732.72
	ಒಟ್ಟು	**4455.12**	**8940.00**	**13395.12**